ಸಂದರ್ಶಕ: ಮಾರಾಟ ಮಾಡುವುದರ ಬಗ್ಗೆ ನಿಮಗೇನಾದರೂ ಅನುಭವವಿದೆಯೇ?
ಉದ್ಯೋಗಾಕಾಂಕ್ಷಿ: ಓಹೋ ಸಾಕಷ್ಟು ಅನುಭವ ಇದೆ ಸಾರ್, ನಾನು ನನ್ನ ಮನೆ ಮಾರಿದ್ದೇನೆ, ಕಾರು ಮಾರಿದ್ದೇನೆ, ಟೀವಿ ಮಾರಿದ್ದೇನೆ. ನನ್ನ ಹೆಂಡತಿಯ ಮೈಮೇಲಿನ ಎಲ್ಲ ಆಭರಣಗಳನ್ನೂ ಸಹ!



ಕಚೇರಿಯ ನೊಟೀಸ್ ಬೋರ್ಡ್‌ನಲ್ಲಿ ಹೀಗೆ ಬರೆದಿತ್ತು.
ಎಲ್ಲ ಉದ್ಯೋಗಿಗಳಿಗೆ ಈ ತಿಂಗಳು ಸಂಬಳದ ಬದಲಿಗೆ ಅವರವರ ಸಂಬಳದ ಆಧಾರದ ಮೇಲೆ ಈರುಳ್ಳಿ ಮೂಟೆಗಳನ್ನು ಅವರವರ ಮನೆಗೆ ಕಳುಹಿಸಲಾಗುವುದು!

ಅಪ್ಪ: ಮಗನೇ, ರಾಜಕೀಯದಲ್ಲಿ ಪ್ರಾಮಾಣಿಕತೆ ಜತೆಗೆ ವಿವೇಚನೆಯೂ ಮುಖ್ಯ.
ಮಗ: ಪ್ರಾಮಾಣಿಕತೆ ಎಂದರೇನಪ್ಪ?
ಅಪ್ಪ: ಕೊಟ್ಟ ಮಾತನ್ನು ನಡೆಸಿಕೊಡುವುದು.
ಮಗ: ಹಾಗಾದರೆ ವಿವೇಚನೆ ಎಂದರೇನು?
ಅಪ್ಪ: ಮಾತು ಕೊಡದೇ ಇರೋದು!

ಶ್ಯಾಮಲ: ನೋಡಿ ನಮ್ಮ ಕಂಪನಿಯ ಪ್ಯಾರಾಚೂಟ್ ಚೆನ್ನಾಗಿ ಬರುತ್ತೆ.
ಗ್ರಾಹಕ: ಹೌದಾ ಮೇಡಂ, ನಾವು ವಿಮಾನದಿಂದ ಜಿಗಿಯುವಾಗ ನಿಮ್ಮ ಪ್ಯಾರಾಚೂಟಿನ ಬಟನ್ ಅದುಮಿದರೂ ಬಿಚ್ಚಿಕೊಳ್ಳದಿದ್ದರೆ ಏನು ಮಾಡುವುದು?
ಶ್ಯಾಮಲ: ತಗೊಂಡು ಬನ್ನಿ, ಬದಲಾಯಿಸಿ ಕೊಡ್ತೀವಿ.

ವೈದ್ಯರು: ನಿನ್ನ ಹೆಂಡತಿಗೆ ಏನೂ ಆಗಿಲ್ಲ. ಚೆನ್ನಾಗಿಯೇ ಇದ್ದಾಳೆ.
ಕಿಟ್ಟು: ಡಾಕ್ಟರೇ, ನೀವು ಸರಿಯಾಗಿ ನೋಡಲಿಲ್ಲ ಅನ್ಸುತ್ತೆ, ಮಾತನಾಡುವಾಗ ಮಧ್ಯೆ ಮಧ್ಯೆ ನಿಲ್ಲಿಸಿಬಿಡುತ್ತಾಳೆ.
ವೈದ್ಯ: ಯಾಕೆ?
ಕಿಟ್ಟು: ಉಸಿರಾಡಲಿಕ್ಕೆ.

**ಕದಿಯಲಾಗದ್ದು**
ಟೀಚರ್: ಎದುರಿಗೇ ಇದ್ದರೂ ಕದಿಯಲು ಆಗದ್ದು ಯಾವುದು?
ಗುಂಡ: ಬಾಬಾ ಬುಡನ್‌ಗಿರಿ ಸಾರ್ !

ಮೇಷ್ಟ್ರು: ಕಿಟ್ಟು, ಭಾರತ ದೇಶದ ಜನಸಂಖ್ಯೆ ಎಷ್ಟು?
ಸುಬ್ಬ: ನೂರಾ ಇಪ್ಪತ್ತೊಂದು ಕೋಟಿ ಹನ್ನೆರಡು ಲಕ್ಷದ ಒಂದು, ಎರಡು, ಮೂರು
ಮೇಷ್ಟ್ರು: ಏನೋ ನಿನ್ನ ಪಿಂಡ. ಒಂದು...ಎರಡು...ಮೂರು... ಸರಿಯಾಗಿ ಹೇಳೋ?
ಕಿಟ್ಟು: ಸೆಕೆಂಡಿಗೊಂದು ಮಗು ಹುಟ್ತಾ ಇದ್ರೆ, ಇನ್ನು ಸರಿಯಾಗಿ ಹೇಗೆ ಹೇಳಲಿ ಸಾರ್!

ಕಿಟ್ಟು: ನಿನ್ನೆ ಹೆಂಡತಿ ಜೊತೆ ಜಗಳ ಮಾಡ್ತಾ ಇದ್ದೆ ಅಲ್ಲ, ಕೊನೆಗೆ ಏನಾಯ್ತು?
ಪುಟ್ಟು: ಅದಾ... ಅವಳು ನನ್ನೆದುರು ಮೊಣಕಾಲೂರಿದಳು.
ಕಿಟ್ಟು: ಅಚ್ಚರಿಯೆನಿಸುತ್ತದೆ. ಅದು ಹೇಗೆ ಸಾಧ್ಯವಾಯ್ತು?
ಪುಟ್ಟು: ನಾನು ಟೇಬಲ್ ಕೆಳಗೆ ನುಸುಳಿದ್ದೆ.

(ಸಂಗ್ರಹ) ಎಚ್.ಆರ್. ವಸ್ತ್ರದ, ಧಾರವಾಡ


ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
CLINICALLY PROVED


◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.